ಶ್ರೀ ವೀರೇಂದ್ರ ಪಾಟೀಲ್.—ತೆಗೆದುಕೊಳ್ಳಬೇಕೆಂದು ಇಚ್ಛೆ ಇರುವುದರಿಂದಲೇ ಪರಿಶೀಲನೆ ಮಾಡುತ್ತಾ ಇದ್ದೇವೆ ಮೊದಲು 8 ಆಥವಾ 8½ ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಲೆಕ್ಕ ಹಾಕಿದ್ದೆವು. ಈಗ ಶ್ರೀಮಾನ್ ಮಾದಯ್ಯ ಗೌಡರು ಹೇಳಿದ ಹಾಗೆ ಫ್ಲಡ್ ಕಂಟ್ರೋಲ್ ಮಾಡುವುದು ಮತ್ತು ಹೆಚ್ಚು ಭೂಮಿಯನ್ನು ನೀರಾವರಿಗೆ ತರಬೇಕೆಂಬ ಉದ್ದೇಶದಿಂದ ಪುನಃ ಪರಿಶೀಲನೆ ಮಾಡಿ ನಿರ್ಧರಿಸಿದೆವು. 45 ಲಕ್ಷ ರೂಪಾಯಿಗಳವರೆಗೂ ಖರ್ಚು ಆಗುತ್ತದೆ ಎನ್ನುವಂತಹ ಅಂದಾಜು ಆಗಿದೆ.

ಶ್ರೀ ಬಿ. ಜೆ. ಲಿಂಗೇ ಗೌಡ.—ಕಣ್ವ ಜಲಾಶಯಕ್ಕೆ ನೀರು ಸಾಕಾಗುವುದಿಲ್ಲ ಎಂದು ಪದೇ ಪದೇ ಬೇಡಿಕೆಗಳು ಬರುತ್ತಾ ಇಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಇಲ್ಲಿ ಬೆಡಿಕೆಗಳನ್ನು ಅವರೇ ಇಡುತ್ತಾ ಇದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ಕಣ್ವಾ ಜಲಾಶಯದಿಂದ 5,000 ಎಕರೆಗೆ ನೀರು ಕೊಡುತ್ತೇವೆ ಎಂದು ಹೇಳಿ 3,000 ಎಕರೆಗೂ ನೀರು ಕೊಡುತ್ತಿಲ್ಲ. ಆದ್ದರಿಂದ ಈ ಮಂಚನಬೆಲೆ ಪ್ರಾಜೆಕ್ಟಿನಿಂದ ನೀರು ಒದಗಿಸುವುಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.— ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

Number of recognised Sanskrit Schools in South Kanara District.

*Q.—68. Sri B. BHASKER SHETTY (Kaup).—

Will the Government be pleased to state :—

(*a*) the total number of recognised Sanskrit Schools in South Kanara District (Information regarding Primary, Middle and High Schools may be given separately) ;

(*b*) the amount of teaching grant and D.A. that is being given annually in respect of the above schools (separate figures for each school may be given) ;

(*c*) the amount of teaching grant and D.A. that is being given annually in respect of the other General Schools in the said district ?

*A.—Sri S. R. KANTHI (Minister for Education).—

(*a*) There are 7 Primary Schools, 2 Midle Schools and 3 High Schools.

(*b*) 50 per cent of the teaching grant and 50 per cent of the D.A. is being paid (i) to the Sanskrit Primary Schools, as per Madras Elementary Rules, as they are special schools, (ii) grant at 80 or 85 per cent of the admitted expenditure is being paid in respect of Sanskrit Middle and High Schools as per Mysore New Grant-in-aid Code.

(*c*) 100 per cent teaching grant is being paid to the General Primary Schools and Middle Schools and 80 or 85 per cent in respect of General High Schools (in Urban and Rural areas respectively).

ಶ್ರೀ ಬಿ. ಭಾಸ್ಕರ ಶೆಟ್ಟಿ.—(ಎ) ಪ್ರಶ್ನೆಗೆ ಉತ್ತರವಾಗಿ 7 ಪ್ರೈಮರಿ ಶಾಲೆಗಳು, 2 ಮಾಧ್ಯ ಏಕ ಶಾಲೆಗಳು ಮತ್ತು 3 ಹೈಸ್ಕೂಲುಗಳು ಇವೆ ಎಂದು ಹೇಳಿದ್ದೀರಿ, ಅವು ಯಾವುವು ಮತ್ತು ಯಾವ ಯಾವ ಸ್ಥಳಗಳಲ್ಲಿ ಇವೆ ?

†ಶ್ರೀ ಎಸ್. ಆರ್. ಕಂಠಿ.—ಆ ಸಮಾಚಾರ ಸದ್ಯದಲ್ಲಿ ನನ್ನ ಹತ್ತಿರವಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಲಿಮೆಂಟರಿ ಸ್ಕೂಲ್ ಎಂದು ಹೇಳತಕ್ಕಪ್ಪು ಈಗ ಮಿಡ್ಲ್ ಸ್ಕೂಲು ಗಳಿದ್ದು ಎರಡು ಮೂರು ವರ್ಷಗಳಿಂದ ಅವುಗಳಲ್ಲಿ ಗವರ್ನಮೆಂಟ್ ಕಾಮನ್ ಎಗ್ಜಾಮಿನೇಷನ್ ಆಗುತ್ತಾ ಇದ್ದು ಅಲ್ಲಿ ಓದುತ್ತಾ ಇರತಕ್ಕ ಮಕ್ಕಳು ಹೈಸ್ಕೂಲಿಗೆ ಹೋಗತಕ್ಕ ಸಂದರ್ಭವಿರುವುದ ರಿಂದ ಅವುಗಳಿಗೆ ಗ್ರಾಂಟನ್ನು ಏಕೆ ಕೊಡುತ್ತಾ ಇಲ್ಲ ?

ಶ್ರೀ ಎಸ್. ಆರ್. ಕಂಠಿ.—ಸಂಸ್ಕೃತ ಪ್ರೈಮರಿ ಸ್ಕೂಲುಗಳ ವಿಚಾರದಲ್ಲಿ ಹಳೇ ಪ್ರೈಸೂರಿನಲ್ಲಿ ಒಂದು ತರಹ ರೂಲ್ಸ್ ಇದೆ. ಸಂಸ್ಕೃತ ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲುಗಳ ಸಂಬಂಧವಾಗಿ ಒಂದು ಹೊಸ ಕೋಡ್ ಇದೆ, ಅದರ ಪ್ರಕಾರ 80 ಅಥವಾ 85 ಪರ್ಸೆಂಟ್ ಎಕ್ಸ್‌ಹೆಂಡೀಚರ್ ಅವೇಲಬಲ್ ಫಂಡ್ಸ್‌ನಿಂದ ಕೊಡುತ್ತಾ ಇದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇರೆಬೇರೆ ಸಾಲತ್ತು ಕೊಡುವುದಕ್ಕೆ ಬೇರೆಬೇರೆ ಕಾನೂನು ಅಡ್ಡಿ ಬರುತ್ತದೆ.

Mr. SPEAKER.—That is disallowed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇರೆಬೇರೆ ಸಹಾಯಗಳನ್ನು ಒದಗಿಸುವುದಕ್ಕೆ ಬೇರೆಬೇರೆ ಕಾನೂನುಗಳು ಅಡ್ಡಿ ಬರುತ್ತಿವೆ. ಯಾರಿಗೋ ಉಪಕಾರವೋ ಅಥವಾ ಅಪಕಾರವೋ ಆದಾಗ ಅದು ಅನುಕೂಲ ಸಿಂಧುವಾಗುತ್ತದೆ, ಆದ್ದರಿಂದ ಅದನ್ನು ಎಷ್ಟು ದಿನಗಳಲ್ಲಿ ತೊಡೆದುಹಾಕಿ ಎಲ್ಲರಿಗೂ ದೊರೆಯಬೇಕಾದ ಸಾಲತ್ತುಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಅವರು ಯೂನಿಫಾರಂ ರೂಲ್ಸ್ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇದ್ದಾರೆ ಎಂದು ಕಾಣುತ್ತದೆ. ಅಲ್ಲಿ ಇರುವ 7 ಪ್ರೈಮರಿ ಶಾಲೆಗಳು ಒಂದು ಪ್ರತ್ಯೇಕ ತರಹದ ಶಾಲೆಗಳು ಅಂತಹ ಶಾಲೆಗಳು ಬೇರೆ ಕಡೆಯಲ್ಲಿ ಇಲ್ಲ, ಅಂತಹ ಶಾಲೆಗಳು ಬೇರೆಕಡೆ ಇಲ್ಲದೇ ಇದ್ದಾಗ ಅವರಿಗೆ ವಿಶೇಷವಾಗಿ ಒಂದು ಬೇರೆ ಕೋಡ್ ಮಾಡಬೇಕಾಗಿದೆ, ಅದನ್ನು ಈಗ ಮಾಡುತ್ತಾ ಇದ್ದೇವೆ.

ಶ್ರೀ ಇ. ನಾರಾಯಣಗೌಡ.—(೩)ಗೆ ಉತ್ತರವಾಗಿ 80-85 ಪರ್ಸೆಂಟಮಾತ್ರ ಗ್ರಾಂಟ್ ಕೊಡುತ್ತಾ ಇದ್ದೇವೆ ಎಂದು ಹೇಳಿದ್ದೀರಿ. ಬಿಲ್ಡಿಂಗ್ ಕಾಂಟ್ರಿಬ್ಯೂಷನ್ ಖಾಸಗೀಯವರಿಗೆ ಕೊಡ ಬೇಕಾದ್ದು ಎಷ್ಟು ಕೊಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಬರುವುದಿಲ್ಲ ನೂರಕ್ಕೆ ಇವತ್ತರಷ್ಟು ಕೊಡಬೇಕೆಂದು ಇದೆ, ಫಂಡ್ಸ್ ಇದ್ದರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಂಸ್ಕೃತಕ್ಕೆ ಆದ್ಯತೆ ಕೊಡಬೇಕೆಂದು ಪ್ರೆಸ್ ರಿಪೋರ್ಟ್ ಬರುತ್ತಾ ಇದೆ—ಸೆಂಟ್ರಲ್ ಗವರ್ನಮೆಂಟ್ ಮತ್ತು ಸ್ಟೇಟ್ ಗವರ್ನಮೆಂಟಿನವರೆಲ್ಲರೂ ಹೇಳುತ್ತಾ ಇದ್ದಾರೆ ಅದರೆ ಮಿಡ್ಲ್ ಸ್ಕೂಲುಗಳಿಗೆ ಸರಿಯಾಗಿ ಗ್ರಾಂಟ್ ಸಿಕ್ಕದೇ ಆ ಶಾಲೆಗಳು ಮುಚ್ಚಲ್ಪಡುತ್ತಿವೆ ಆದ್ದರಿಂದ ಅವುಗಳನ್ನು ಜನರಲ್ ಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೆ ಗಳು ಬಂದಿವೆಯೇ ?

ಶ್ರೀ ಎಸ್. ಆರ್. ಕಂಠಿ.—ಬಂದಿವೆ. ಅವನ್ನು ಸಂಸ್ಕೃತ ಶಾಲೆಗಳಿಗೆ ಬದಲಾಗಿ ಜನರಲ್ ಶಾಲೆಗಳಾಗಿ ಪರಿವರ್ತನೆ ಮಾಡುವುದಕ್ಕೆ ನಾವು ಆತಂಕವೂ ಇಲ್ಲ. ಮಾಡುವುದಿದ್ದರೆ ಮಾಡಬಹುದು. ಸೌತ್ ಕೆನರಾದಲ್ಲಿ 100 ಪರ್ಸೆಂಟ್ ಟೀಚಿಂಗ್ ಗ್ರಾಂಟ್ ಸಿಕ್ಕುತ್ತಾ ಇದೆ, ಮೆಂಟೆನೆನ್ಸ್ ಮಾತ್ರ 50 ಪರ್ಸೆಂಟ್ ಎಂದು ಇದೆ. ಆ ಪ್ರಕಾರ ಕೆಲಸ ಮಾಡುವುದಕ್ಕೆ ಯಾರೂ ಆತಂಕ ಮಾಡುವುದಿಲ್ಲ.

ಶ್ರೀ ಎನ್. ಹುಚ್ಚಮಾಸಿ ಗೌಡ.—ರಾಜ್ಯದ ಬೇರೆ ಭಾಗಗಳಲ್ಲಿ ಇಂತಹ ಸಂಸ್ಕೃತ ಶಾಲೆ ಗಳನ್ನು ತೆಗೆದರೆ ಅವರಿಗೆ ಈಗಿರುವ ಪ್ರಕಾರವೇ ಗ್ರಾಂಟ್ ಕೊಡುತ್ತೀರಾ ಅಥವಾ ಹೊಸ ಕೋಡ್ ಪ್ರಕಾರ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಸದಕ್ಕೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಇದೆ; ಅದನ್ನು ಸರಿಮಾಡಿ ಒಂದೇ ರೀತಿಯಲ್ಲಿ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ, ಅದಕ್ಕೆ ಸ್ವಲ್ಪ ಕಾಲವಾಗುತ್ತದೆ ಎಂದು ಭಾವಿಸುತ್ತೇನೆ.

ಶ್ರೀ ದಯಾನಂದ ಆರ್. ಕಳ್ಳೆ.—ಕೆಲವು ಶಾಲೆಗಳನ್ನು ಜನರಲ್ ಶಾಲೆಗಳಾಗಿ ಪರಿವರ್ತನೆ ಮಾಡಬೇಕೆಂದು 2 ವರ್ಷಗಳಿಂದ ಕೇಳುತ್ತಿದ್ದರೂ ಏಕೆ ಹಾಗೆ ಮಾಡಿರುವುದಿಲ್ಲ ?

ಶ್ರೀ ಎಸ್. ಆರ್ ಕಂಠಿ.—ಅದಕ್ಕೆ ಮೊದಲು ಅನುಮತಿ ಬೇಕಾಗಿಲ್ಲ, ಪರಿವರ್ತನೆ ಮಾಡಿ ಕೇಳಿಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಸಂಸ್ಕೃತ ಶಾಲೆ ಜನರಲ್ ಶಾಲೆಯಾದಾಗ ಸಂಸ್ಕೃತದ ವಿಚಾರ ಬೇನಾಗುತ್ತದೆ.

ಅಧ್ಯಕ್ಷರು.—ಸಂಸ್ಕೃತ ಉಳಿಯುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜಾಗ್ರತೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೀರಾ.

ಶ್ರೀ ಎಸ್. ಆರ್. ಕಂಠಿ.—ತೀರ್ಮಾನ ತೆಗೆದುಕೊಳ್ಳುವ ವಿಚಾರವನ್ನು ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಎಸ್. ಗೋಪಾಲ ಗೌಡ.—ಹಳೆಯ ಮೈಸೂರಿನಲ್ಲಿ ಒಂದು ಗ್ರಾಂಟ್-ಇನ್-ಏಡ್ ಕೋಡ್ ಇದೆ. ಹೊಸದೊಂದನ್ನು ತಯಾರಿಸುತ್ತಿದ್ದೀರಿ. ಹಾಗೆ ಮಾಡುವಾಗ ಹಳೆಯ ಮೈಸೂರಿದಲ್ಲಿದ್ದ ಸೌಲಭ್ಯವನ್ನು ಳಿಸಿ ಬೇರೆ ಭಾಗಗಳಿಗೆ ಕೊಡುವ ಸೌಲಭ್ಯ ದೊರೆಯುವಂತೆ ಮಾಡುತೀರಾ ಅಥವಾ ಇರುವ ಸೌಲಭ್ಯ ಕತ್ತುಹಾಕಿ ಪ್ರತ್ಯೇಕ ಕೋಡ್ ತಯಾರಿಸಲು ಯೋಚಿಸುತ್ತಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಪ್ರೈಮರಿ ವಿದ್ಯಾಭ್ಯಾಸದ ವಿಚಾರವಾಗಿ ಹೇಳುವುದಾದರೆ ಹೊಸ ಕೋಡಿನಿಂದ ಹಳೇ ಮೈಸೂರು ಇಲಾಖೆಗೆ ಲಾಭವಿದೆ. ಆದರೆ ಸ್ಪೆಷಲ್ ಕೋಡ್ ಎಂಬುದೊಂದಿರುತ್ತದೆ. ಅದನ್ನು ಯಾವ ರೀತಿ ಮಾಡಬೇಕು, ಬೇರೆ ಬೇರೆ ಕಡೆ ಬೇರೆ ಬೇರೆ ರೀತಿ ಇದೆ, ಹೇಗೆ ಮಾಡಿದರೆ ಒಳ್ಳೆಯದು ಎಂದು ಸ್ಪೆಷಲ್ ಕೋಡ್ ವಿಚಾರದಲ್ಲಿ ಯೋಚನೆ ಮಾಡುತ್ತಿದ್ದೇವೆ. ಹಳೇ ಮೈಸೂರು ಭಾಗಕ್ಕೆ ಬಹುಶಃ ಯಾವ ತೊಂದರೆಯೂ ಆಗುವುದಿಲ್ಲ ಎಂದು ಕಾಣುತ್ತದೆ.

Construction of a Primary Health Unit at Mudigere Village in Channapatna Taluk.

* *Q.*—78. Sri B. J. LINGE GOWDA (Channapatna).—

Will the Government be pleased to state:—

(*a*) the date on which the foundation was laid for the construction of a Primary Health Unit at Mudigere Village in Channapatna Taluk;

(*b*) the action taken for constructing the said building ?

A.—Sri K. NAGAPPA ALVA (Minister for Health).—

(*a*) 25th February 1963.

(*b*) Plans and estimates for the construction of buildings have been prepared and a site has been selected.

ಶ್ರೀ ಬಿ. ಜೆ. ಲಿಂಗೇಗೌಡ.—25-2-63 ರಲ್ಲಿ ಅಸ್ತಿಭಾರ ಹಾಕಿದರೂ ಕಟ್ಟಡದ ಕೆಲಸವನ್ನೇಕೆ ಪ್ರಾರಂಭಿಸಿಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.—ಬಡ್ಜೆಟ್ ಕಡಿತದಿಂದ ಕಟ್ಟಡದ ಕೆಲಸ ಪ್ರಾರಂಭಿಸುವುದಕ್ಕಾಗಿಲ್ಲ.

ಶ್ರೀ ಬಿ. ಜೆ. ಲಿಂಗೇಗೌಡ.—ಕಟ್ಟಡಕ್ಕಾಗಿ 3 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಡ್ಜೆಟ್ಟಿನಲ್ಲಿ ಹಣವಿಲ್ಲದಿರುವಾಗ ಅಸ್ತಿಭಾರ ಹಾಕುವುದರ ಅಭಿಪ್ರಾಯವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಬಡ್ಜೆಟ್ಟಿನಲ್ಲಿ ಹಣದ ಕಡಿತ ಕಡಿಮೆ ಆಗಿದೆ.

ಶ್ರೀ ಬಿ. ಭಾನ್ಕರಶೆಟ್ಟಿ.—1962 ರಲ್ಲಿ ಅಸ್ತಿಭಾರ ಹಾಕಿ ಇನ್ನೂ ಕಟ್ಟಡ ಕಟ್ಟದಿರುವ ಸಂದರ್ಭಗಳಿವೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸುತ್ತೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಏಪ್ರಿಲ್ ನಂತರ ಪ್ರಾರಂಭಿಸಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಂದಾಜು ಮಂಜೂರಾಗಿ ಟೆಕ್ನಿಕಲ್ ಸ್ಯಾಂಕ್ಷನ್ ಆದಮೇಲೆ ಮತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆದಮೇಲೆ ಅಸ್ತಿಭಾರ ಹಾಕಬೇಕು. ಹಾಗೆ ಮಾಡದಿದ್ದರೆ ಕಟ್ಟಡದ ಕೆಲಸವಾಗಲು ಸಾಧ್ಯವೆ ?